<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.181/2017</u>

ದಿಃ 28.10.2021

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-17 Pw-5

| | | |
|---|---|---|
| ಹೆಸರು | ಃ | ಚನ್ನೇಗೌಡ |
| ತಂದೆಯ ಹೆಸರು | ಃ | ಕರಿಗೌಡ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ತಾವರೆಕೆರೆ,<br>ಬೆಂಗಳೂರು ದಕ್ಷಿಣ ತಾಲ್ಲೂಕು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನಾನು ತಾವರೆಕೆರೆಯ ಮಧು ಬಾರ್‌ನಲ್ಲಿ ಕ್ಯಾಶಿಯರ್ ಆಗಿ ಸುಮಾರು 8 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ದಿಃ04.09.2017ರಂದು ಪೊಲೀಸರು ನಮ್ಮ ಬಾರ್‌ನ ಬಳಿ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದು, ನಾನು ಆತನನ್ನು ಆ ಹಿಂದೆ ದಿಃ28.08.2017ರಂದು ಸುಮಾರು 1 ವಾರದ ಹಿಂದೆ ರಾತ್ರಿ 9.30ರ ಸಮಯದಲ್ಲಿ ಆತನೊಂದಿಗೆ ಮತ್ತೊಬ್ಬ ವ್ಯಕ್ತಿ ಬಂದಿದ್ದು ನಾನು ನೋಡಿದ್ದೆ. ಅವರು ಹಯ್‌ವರ್ಡ್ ವಿಸ್ಕಿಯನ್ನು ಒಂದು ಪೌಚ್ ರೂ.65ನ್ನು ಖರೀದಿಸಿ ಹೋಗಿದ್ದರು. ನಾನು ಆ ವ್ಯಕ್ತಿಯನ್ನು ನೋಡಿದ್ದಾಗಿ ಪೊಲೀಸರಿಗೆ ಹೇಳಿದ್ದೆ. ನಾನು ಪೊಲೀಸರು ಕರೆದುಕೊಂಡು ಬಂದ ನಂತರ ಆ ವ್ಯಕ್ತಿಯ ಹೆಸರು ತಿಳಿಯಿತು. ನಾನು ಆತನನ್ನು

ನೋಡಿದರೆ ಗುರುತಿಸುತ್ತೇನೆ. ಆತ 1ನೇ ಆರೋಪಿಯಿದ್ದು ಆತನ ಜೊತೆಯಲ್ಲಿ ಬಂದಿದ್ದ ಮತ್ತೊಬ್ಬ ವ್ಯಕ್ತಿಯ ಹೆಸರು ಹೇಮಂತ್ ಕುಮಾರ್ ಆಗಿತ್ತು. ನಾನು 1ನೇ ಆರೋಪಿ ಮತ್ತು ಮೃತ ಹೇಮಂತ್ ಕುಮಾರನನ್ನು ನೋಡಿದರೆ ಗುರುತಿಸುತ್ತೇನೆ. (1 ಮತ್ತು 3ನೇ ಆರೋಪಿತರ ವಕೀಲರು ಆರೋಪಿತರ ಗೈರು ಹಾಜರಿ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಆರೋಪಿತರ ಗುರುತಿಸುವಿಕೆ ನಿರಾಕರಿಸುವುದಿಲ್ಲವೆಂದು ನುಡಿದಿರುತ್ತಾರೆ) ಕಡತದಲ್ಲಿನ ಒಂದು ಭಾವಚಿತ್ರವನ್ನು ಸಾಕ್ಷಿಗೆ ತೋರಿಸಿದ್ದು, ಸದರಿ ಭಾವಚಿತ್ರದಲ್ಲಿರುವ ವ್ಯಕ್ತಿ ಹೇಮಂತ್ ಕುಮಾರ್ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿ.ಪಿ.15 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ. ಬಿ.ಹೆಚ್.ಸಿ.ಕೆ., ಮತ್ತು ಡಿ.ಎನ್.ಹೆಚ್., ವಕೀಲರಿಂದ 1 ಮತ್ತು 3ನೇ ಆರೋಪಿಗಳ ಪರವಾಗಿಃ ವಕೀಲರು ಪ್ರಕರಣ ಕರೆದಾಗ ಗೈರು ಹಾಜರಿದ್ದು, 2ನೇ ಆರೋಪಿ ಬೇರೆ ವಕೀಲರನ್ನು ನೇಮಕ ಮಾಡಿಕೊಳ್ಳುವುದಾಗಿ ಕೋರಿದ್ದು ಖರ್ಚುಸಹಿತ ಅನುಮತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ದಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.